# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
## ಗೊಟಗೋಡಿ

# ಪಿಎಚ್.ಡಿ ಕೋರ್ಸ್‌ವರ್ಕ್ ತರಗತಿಗಳ ಉದ್ಘಾಟನೆ

ಅಧ್ಯಕ್ಷತೆ

**ಪ್ರೊ. ಸಿ.ಟಿ ಗುರುಪ್ರಸಾದ್**

ಮಾನ್ಯ ಕುಲಪತಿಯವರು(ಪ್ರ),

ಉದ್ಘಾಟನೆ

**ಪ್ರೊ. ಮಾಧವ ಪೆರಾಜೆ**

ಪ್ರಾಧ್ಯಾಪಕರು ಹಾಗೂ ಡೀನರು, ವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಉಪಸ್ಥಿತಿ

**ಪ್ರೊ.ಎನ್.ಎಮ್ ಸಾಲಿ**

ಕುಲಸಚಿವರು (ಮೌಲ್ಯಮಾಪನ)

ದಿನಾಂಕ: 24.5.2022 ಸಮಯ: ಬೆಳಿಗ್ಗೆ 10.30 ಕ್ಕೆ
ಸ್ಥಳ: ಮಲ್ಲಿಗೆದಂಡೆ ಸಭಾಂಗಣ

## ಸರ್ವರಿಗೂ ಆತ್ಮೀಯ ಸ್ವಾಗತ

**ಡಾ. ಚಂದ್ರಪ್ಪ ಸೊಬಟಿ**
ಸಂಚಾಲಕರು
ಪಿಎಚ್.ಡಿ. ಕೋರ್ಸ್‌ವರ್ಕ್ ತರಗತಿಗಳು

**ಪ್ರೊ. ಸಿ.ಟಿ ಗುರುಪ್ರಸಾದ್**
ಕುಲಸಚಿವರು
ಕ.ಜಾ.ವಿ.ವಿ. ಗೊಟಗೋಡಿ.

# ಉದಯಕಾಲ

ಕರ್ನಾಟಕ ಜಾನಪದ ವಿವಿಯಲ್ಲಿ ನಡೆದ ಕೋರ್ಸ್ ವರ್ಕ್ ತರಗತಿಗಳನ್ನು ಉದ್ಘಾಟನೆ

## ಸಂಶೋಧನೆ ಸತ್ಯದ ಅನ್ವೇಷಣೆಯಾಗಿದೆ: ಡಾ. ಮಾಧವ ಪೆರಾಜೆ



Hubli Edition
May 25, 2022 Page No. 2
Powered by : eReleGo.com

**Source: Udayakala, date: 25-05-2022**

ಹಂಪಿ ಕನ್ನಡ ವಿವಿ ಪ್ರಾಧ್ಯಾಪಕ ಡಾ. ಮಾಧವ ಪೆರಾಜೆ ಸಲಹೆ | ನಾಲ್ಕು ದಿನಗಳ ಕೋರ್ಸ್ ವರ್ಕ್ ತರಗತಿ ಉದ್ಘಾಟನೆ

## ಪಿಎಚ್.ಡಿ ಅಧ್ಯಯನ ಜ್ಞಾನ ಪಡೆಯುವ ಶಿಸ್ತಾಗಲಿ

■ ವಿಜಯವಾಣಿ ಸುದ್ದಿಜಾಲ ಶಿಗ್ಗಾಂವಿ

ಸಂಶೋಧನೆ ಸಮಸ್ಯೆಯ ಹಿನ್ನೆಲೆಯಿಂದ ಪ್ರಾರಂಭವಾಗಬೇಕು. ಪಿಎಚ್.ಡಿ ಎನ್ನುವುದು ಕೇವಲ ಉದ್ಯೋಗ ಪಡೆದುಕೊಳ್ಳುವ ಪದವಿಯಾಗಿರದೆ ಜ್ಞಾನವನ್ನು ಪಡೆದುಕೊಳ್ಳುವ ಶಿಸ್ತಾಗಬೇಕು. ಸೈದ್ಧಾಂತಿಕ ಶಿಸ್ತಾಗಿ ಬಳಕೆಯಾಗಿ ಭೂಮಿಯ ಆಕಾಶಕಾಯಗಳ ಕಾರ್ಯಚಟುವಟಿಗೆ ವೈಜ್ಞಾನಿಕ ಸಂಶೋಧನೆಯ ಹಿನ್ನೆಲೆಯನ್ನೆ ಕೊಡಬಹುದು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಮಾಧವ ಪೆರಾಜೆ ಹೇಳಿದರು.

ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಸೋಮವಾರ ಆಯೋಜಿಸಿದ್ದ ಪಿಎಚ್.ಡಿ ಸಂಶೋಧನಾರ್ಥಿಗಳಿಗೆ ನಾಲ್ಕು ದಿನಗಳ ಕೋರ್ಸ್ ವರ್ಕ್ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಜ್ಞಾನದ ಆಯಾಮಗಳು ಭಿನ್ನವಾಗಿವೆ. ಜ್ಞಾನವನ್ನು ಕೇವಲ ಮೌಖಿಕವಾಗಿ ಪರಂಪರೆಯನ್ನು ಬಿತ್ತರಿಸುವುದಲ್ಲ, ಅದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಬೇಕು. ವಿಜ್ಞಾನ ಮತ್ತು ಅನುಸಂಧಾನಗೊಳಿಸಿ ಪಿಎಚ್.ಡಿ ಅಧ್ಯಯನವನ್ನು ಮುಂದುವರಿಸುವುದು ಸೂಕ್ತ ಎಂದು ಹೇಳಿದರು.



ಶಿಗ್ಗಾಂವಿಯ ಕರ್ನಾಟಕ ಜಾನಪದ ವಿವಿ ಸಭಾಂಗಣದಲ್ಲಿ ಸೋಮವಾರ ಪಿಎಚ್.ಡಿ ಸಂಶೋಧನಾರ್ಥಿಗಳಿಗೆ ನಾಲ್ಕು ದಿನಗಳ ಕೋರ್ಸ್ ವರ್ಕ್ ತರಗತಿಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಮಾಧವ ಪೆರಾಜೆ ಉದ್ಘಾಟಿಸಿದರು. ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ್, ಪ್ರೊ. ಎನ್.ಎಂ. ಸಾಲಿ, ಡಾ.ಚಂದ್ರಪ್ಪ ಸೊಬಟಿ ಇತರರಿದ್ದರು.

ಅಧ್ಯಕ್ಷತೆ ವಹಿಸಿದ್ದ ಪ್ರಭಾರ ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ್ ಮಾತನಾಡಿ, ಸಂಶೋಧನೆ ಎಂಬುದು ತಪಸ್ಸು ಮಾಡಿದ ಹಾಗೆ, ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಎನ್ನುವುದು ಒಂದು ಅವಿಭಾಜ್ಯ ಅಂಗವಾಗಿದೆ. ಜತೆಗೆ ಪಿಎಚ್.ಡಿ ಅಧ್ಯಯನವು ಜ್ಞಾನದ ದಿಗಂತವನ್ನು ವಿಸ್ತರಿಸಿಕೊಳ್ಳುವ ಒಂದು ಶೈಕ್ಷಣಿಕ ವಿಧಾನವಾಗಿದೆ. ಹಾಗಾಗಿ ಸಂಶೋಧನಾರ್ಥಿಗಳು ಅಧ್ಯಯನದ ಪೂರ್ವದಲ್ಲಿಯೇ ಸಂಶೋಧನೆಗೆ ಬೇಕಾದ ತಯಾರಿ ಮಾಡಿಕೊಂಡಿರಬೇಕು. ಎಲ್ಲರೂ ತಿಳಿದಿರುವ ಹಾಗೆ ಸಂಶೋಧನೆಯು ಸರಳವಾದ ವಿಷಯವಲ್ಲ. ಸಂಶೋಧನೆಯಿಂದ ಮಾತ್ರ ನಾವು ಯಶಸ್ಸಿನ ದಾರಿಯನ್ನು ಕಂಡುಕೊಳ್ಳಲು ಸಾಧ್ಯ. ಹಾಗಾಗಿ ಜಾನಪದ ವಿಶ್ವವಿದ್ಯಾಲಯವು ಒಂದು ಶಿಸ್ತುಬದ್ಧವಾದ ಸಂಶೋಧನೆಗೆ ಪ್ರಾಧಾನ್ಯತೆ ನೀಡಲಿದೆ ಎಂದು ಹೇಳಿದರು.

ಮೌಲ್ಯಮಾಪನ ಕುಲಸಚಿವ ಪ್ರೊ. ಎನ್.ಎಂ. ಸಾಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಧನಹಾಯ ಆಯೋಗವು ಶಿಕ್ಷಣದ ಗುಣಮಟ್ಟವನ್ನು ಸುಧಾರಣೆ ಮಾಡಲು ಅನೇಕ ನಿಯಮಗಳನ್ನು ಜಾರಿಗೆ ತಂದಿದೆ. ಅದರಲ್ಲಿ ಅಧ್ಯಾಪಕರಿಗೆ ಪಿಎಚ್.ಡಿ ಕಡ್ಡಾಯ ಎಂಬ ನಿಯಮವಿದೆ. ಹಾಗಾಗಿ ಪಿಎಚ್.ಡಿ ಅಧ್ಯಯನಕ್ಕೆ ಕೋರ್ಸ್ ವರ್ಕ್ ಕಡ್ಡಾಯವಾಗಿದೆ. ವಿಶ್ವವಿದ್ಯಾಲಯದ ನಿಯಮವನ್ನು ಸಂಶೋಧನಾರ್ಥಿಗಳು ಕಡ್ಡಾಯವಾಗಿ ಪಾಲಿಸಿ, ಒಳ್ಳೆಯ ಸಂಶೋಧನಾ ಪ್ರಬಂಧಗಳನ್ನು ಮಂಡಿಸಬೇಕು ಎಂದು ಸಲಹೆ ನೀಡಿದರು.

ಹಿರಿಯ ಸಂಶೋಧನಾಧಿಕಾರಿಗಳಾದ ಡಾ.ಪ್ರೇಮಕುಮಾರ, ಕಲಾ ಅಧ್ಯಾಪಕ ಶರೀಫ್ ಮಾಕಪ್ಪನವರ, ಪ್ರಾಧ್ಯಾಪಕರಾದ ಡಾ. ಚಂದ್ರಪ್ಪ ಸೊಬಟಿ, ಡಾ.ಮಲ್ಲಿಕಾರ್ಜುನ ಮಾನ್ಪಡೆ, ಡಾ.ಬಸವರಾಜ ಎಸ್.ಜಿ. ಹಾಗೂ ಬೋಧಕ ಬೋಧಕೇತರ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಹಾಜರಿದ್ದರು.

**Source: Vijayavani, date: 26-05-2022**

# ವಿವಿಗೆ ಸಂಶೋಧನೆ ಅವಿಭಾಜ್ಯ ಅಂಗ

## ಕೋರ್ಸ್ ವರ್ಕ್ ತರಗತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರೊ. ಗುರುಪ್ರಸಾದ್

KP

• **ಕನ್ನಡಪ್ರಭ ವಾರ್ತೆ** ಶಿಗ್ಗಾಂವಿ

ಸಂಶೋಧನೆ ವಿಶ್ವವಿದ್ಯಾಲಯಕ್ಕೆ ಒಂದು ಅವಿಭಾಜ್ಯ ಅಂಗವಾಗಿದೆ.ಜ್ಞಾನದದಿಗಂತವನ್ನು ವಿಸ್ತರಿಸಿಕೊಳ್ಳುವ ಒಂದು ಶೈಕ್ಷಣಿಕ ವಿಧಾನವಾಗಿದೆ ಎಂದು ಪ್ರಭಾರ ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ್ ಹೇಳಿದರು.

ಅವರು ಮಂಗಳವಾರ ತಾಲೂಕಿನ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಪಿಎಚ್‌ಡಿ ಸಂಶೋಧನಾರ್ಥಿಗಳಿಗೆ ಹಮ್ಮಿಕೊಂಡಿರುವಕೋರ್ಸ್ ವರ್ಕ್ ತರಗತಿಗಳನ್ನು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಡಾ. ಮಾಧವ ಪೆರಾಜೆ ಮಾತನಾಡಿ, ಪಿಎಚ್‌ಡಿ ಎನ್ನುವುದು ಯಾವುದೇ ಒಂದು ಅಧಿಕೃತ ಸಂಸ್ಥೆ ನೀಡುವ ಒಂದು ಉನ್ನತ ಪದವಿ. ಸಂಶೋಧನಾರ್ಥಿಗಳು ಸರ್ಟಿಫಿಕೇಟ್ ಪಡೆದುಕೊಳ್ಳುವುದಕ್ಕೆ ಗಮನ ಕೊಡುವುದರ ಜೊತೆಗೆ ಜ್ಞಾನ ಸಂಪಾದನೆಗೆ ಹೆಚ್ಚಿನ ಆದ್ಯತೆ ಕೊಡಬೇಕು. ಜ್ಞಾನದ ಆಯಾಮಗಳು ಭಿನ್ನವಾಗಿವೆ. ಸಂಶೋಧನೆಯು ಒಂದು ವಿಸ್ತಾರ ಅಧ್ಯಯನ ಕ್ಷೇತ್ರವಾಗಿದ್ದು ಉನ್ನತವಾದ ಜ್ಞಾನವನ್ನು ಸಂಪಾದಿಸುವ ಒಂದು ವಿಧಾನ.

ಪಿ.ಎಚ್.ಡಿ ಎನ್ನುವುದು ಕೇವಲ ಉದ್ಯೋಗಕ್ಕೆ ಪಡೆದುಕೊಳ್ಳುವ ಪದವಿಯಾಗಿರದೆ ಜ್ಞಾನವನ್ನು ಪಡೆದುಕೊಳ್ಳುವ ಶಿಸ್ತಾಗಬೇಕು. ಸೈದ್ಧಾಂತಿಕ ಶಿಸ್ತಾಗಿ ಬಳಕೆಯಾಗಬೇಕು.ಈಭೂಮಿಯಆಕಾಶಕಾಯಗಳ ಕಾರ್ಯಚಟುವಟಿಗೆ ವೈಜ್ಞಾನಿಕ ಸಂಶೋಧನೆಯ ಹಿನ್ನೆಲೆಯನ್ನೆ ಕೊಡಬಹುದು. ಜ್ಞಾನವನ್ನು ಕೇವಲ ಮಾಹಿಕವಾಗಿ ಬಿತ್ತರಿಸುವುದಲ್ಲ, ಅದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಬೇಕು ವಿಜ್ಞಾನ ಮತ್ತು ಪರಂಪರೆಯನ್ನು ಅನುಸಂದಾನಗೊಳಿಸಿ ಪಿ.ಎಚ್.ಡಿ ಅಧ್ಯಯನವನ್ನು ಮುಂದುವರಿಸುವುದು ಸೂಕ್ತ. ಜಾನಪದ ವಿಶ್ವವಿದ್ಯಾಲಯವು ಈಗಾಗಲೇ ದಶಮಾನೋತ್ಸವದ ಹೊಸ್ತಿಲಲ್ಲಿದೆ. ಹಾಗಾಗಿ ಬರುವ ದಿನಗಳಲ್ಲಿ ಜಾನಪದ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟಕ್ಕೆ ಬೆಳೆಸಲು ನಾವೆಲ್ಲರು ಶ್ರಮಿಸಬೇಕಿದೆ ಎಂದರು.

ಮೌಲ್ಯಮಾಪನ ಕುಲಸಚಿವ ಪ್ರೊ. ಎನ್.ಎಂ. ಸಾಲಿ ಮಾತನಾಡಿ, ಧನಸಹಾಯ ಆಯೋಗವು ಶಿಕ್ಷಣದ ಗುಣಮಟ್ಟವನ್ನು ಸುಧಾರಣೆ ಮಾಡಲು ಅನೇಕ ನಿಯಮಗಳನ್ನು ಜಾರಿಗೆ ತಂದರು ಅದರಲ್ಲಿ ಅಧ್ಯಾಪಕರಿಗೆ ಪಿ.ಎಚ್.ಡಿ ಕಡ್ಡಾಯ ಎಂಬ ನಿಯಮ ಜಾರಿಗೆ ತಂದರು. ಪಿಎಚ್‌ಡಿ ಅಧ್ಯಯನಕ್ಕೆ ಕೋರ್ಸ್ ವರ್ಕ್ ಕಡ್ಡಾಯವಾಗಿದೆ. ಹಾಗಾಗಿ ವಿಶ್ವವಿದ್ಯಾಲಯದ ನಿಯಮವನ್ನು ಸಂಶೋಧನಾರ್ಥಿಗಳು ಕಡ್ಡಾಯವಾಗಿ ಪಾಲಿಸಿ ಒಂದು ಒಳ್ಳೆಯ ಸಂಶೋಧನಾ ಪ್ರಬಂಧಗಳನ್ನು ಮಂಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಹಿರಿಯ ಸಂಶೋಧನಾದಿಕಾರಿ ಡಾ. ಪ್ರೇಮಕುಮಾರ ಹಾಗೂ ಬೋಧಕ ಬೋಧಕೇತರ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಹಾಜರಿದ್ದರು. ಕಲಾ ಅಧ್ಯಾಪಕ ಶರೀಫ ಪ್ರಾರ್ಥಿಸಿದರು. ಪ್ರಾಧ್ಯಾಪಕ ಡಾ. ಚಂದ್ರಪ್ಪ ಸೊಬಟಿ ಸ್ವಾಗತಿಸಿದರು. ಡಾ. ಮಲ್ಲಿಕಾರ್ಜುನ ಮಾನ್ಪಡೆ ನಿರೂಪಿಸಿದರು. ಡಾ. ಬಸವರಾಜ ಎಸ್.ಜಿ. ವಂದಿಸಿದರು.



**ಗೊಟಗೋಡಿಯ ಕರ್ನಾಟಕ ಜಾನಪದ ವಿವಿಯಲ್ಲಿ ಪಿಎಚ್‌ಡಿ ಸಂಶೋಧನಾರ್ಥಿಗಳಿಗೆ ಹಮ್ಮಿಕೊಂಡಿರುವ ಕೋರ್ಸ್ ವರ್ಕ್ ತರಗತಿ ಕಾರ್ಯಕ್ರಮಕ್ಕೆ ಗಣ್ಯರು ಚಾಲನೆ ನೀಡಿದರು.**

- ಪಿ.ಎಚ್.ಡಿ ಎನ್ನುವುದು ಕೇವಲ ಉದ್ಯೋಗಕ್ಕೆ ಪಡೆದುಕೊಳ್ಳುವ ಪದವಿಯಾಗಿರದೆ ಜ್ಞಾನವನ್ನು ಪಡೆದುಕೊಳ್ಳುವ ಶಿಸ್ತಾಗಬೇಕು
- ಸೈದ್ಧಾಂತಿಕ ಶಿಸ್ತಾಗಿ ಬಳಕೆಯಾಗಬೇಕು
- ಜ್ಞಾನವನ್ನು ಕೇವಲ ಮಾಹಿಕವಾಗಿ ಬಿತ್ತರಿಸುವುದಲ್ಲ, ಅದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಬೇಕು

ಕನ್ನಡಪ್ರಭ Wed, 25 May 2022
https://kpepaper.asianetnews.com/c/68235092

**Source: KannadaPrabha, date: 25-05-2022**

# ಜ್ಞಾನ ಸಂಪಾದನೆಗೆ ಪ್ರಧಾನ ಆದ್ಯತೆ ಕೊಡಿ



ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಜರುಗಿದ ಕೋರ್ಸ್ ವರ್ಕ್ ತರಗತಿಗಳ ಕಾರ್ಯಕ್ರಮವನ್ನು ಪ್ರಭಾರ ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ್ ಉದ್ಘಾಟಿಸಿದರು.

ಶಿಗ್ಗಾವಿ(ಗ್ರಾಮೀಣ): ಪಿಎಚ್.ಡಿ. ಎನ್ನುವುದು ಯಾವುದೇ ಒಂದು ಅಧಿಕೃತ ಸಂಸ್ಥೆ ನೀಡುವ ಒಂದು ಉನ್ನತ ಪದವಿ. ಸಂಶೋಧನಾರ್ಥಿಗಳು ಸರ್ಟಿಫಿಕೇಟ್ ಪಡೆದುಕೊಳ್ಳುವುದಕ್ಕೆ ಗಮನ ಕೊಡುವುದರ ಜೊತೆಗೆ ಜ್ಞಾನ ಸಂಪಾದನೆಗೆ ಪ್ರಧಾನ ಆದ್ಯತೆ ಕೊಡಬೇಕು ಎಂದು ಡಾ ಮಾಧವ ಪೆರಾಜೆ ಸಂಶೋಧನಾರ್ಥಿಗಳಿಗೆ ತಿಳಿಸಿದರು.

ತಾಲೂಕಿನ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಸಂಶೋಧನಾರ್ಥಿಗಳಿಗೆ ಹಮ್ಮಿಕೊಂಡಿರುವ ಕೋರ್ಸ್ ವರ್ಕ್ ತರಗತಿ ಉದ್ಘಾಟಿಸಿ ಮಾತನಾಡಿದರು.

ಜ್ಞಾನದ ಆಯಾಮಗಳು ಭಿನ್ನವಾಗಿವೆ. ಸಂಶೋಧನೆಯು ಒಂದು ವಿಸ್ತಾರ ಅಧ್ಯಯನ ಕ್ಷೇತ್ರವಾಗಿದ್ದು ಉನ್ನತವಾದ ಜ್ಞಾನ ಸಂಪಾದಿಸುವ ಒಂದು ವಿಧಾನವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಭಾರ ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ್ ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಎನ್ನುವುದು ಒಂದು ಅವಿಭಾಜ್ಯ ಅಂಗವಾಗಿದೆ. ಜೊತೆಗೆ ಪಿ.ಎಚ್.ಡಿ. ಅಧ್ಯಯನವು ಜ್ಞಾನದ ದಿಗಂತವನ್ನು ವಿಸ್ತರಿಸಿಕೊಳ್ಳುವ ಒಂದು ಶೈಕ್ಷಣಿಕ ವಿಧಾನವಾಗಿದೆ. ಹಾಗಾಗಿ ಸಂಶೋಧನಾರ್ಥಿಗಳು ಅಧ್ಯಯನದ ಪೂರ್ವದಲ್ಲಿಯೆ ಸಂಶೋಧನೆಗೆ ಪೂರ್ವದಲ್ಲಿ ಬೇಕಾದ ತಯಾರಿ ಮಾಡಿಕೊಂಡಿರಬೇಕು ಎಂದರು.

ಜಾನಪದ ವಿಶ್ವವಿದ್ಯಾಲಯವು ಈಗಾಗಲೇ ದಶಮಾನೋತ್ಸವದ ಹೊಸ್ತಿಲಲ್ಲಿದೆ. ಹಾಗಾಗಿ ಬರುವ ದಿನಗಳಲ್ಲಿ ಜಾನಪದ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟಕ್ಕೆ ಬೆಳೆಸಲು ನಾವೆಲ್ಲರು ಶ್ರಮಿಸಬೇಕಿದೆ ಎಂದರು.

ಮೌಲ್ಯಮಾಪನ ಕುಲಸಚಿವ ಪ್ರೊ. ಎನ್.ಎಂ. ಸಾಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಧನಸಹಾಯ ಆಯೋಗವು ಶಿಕ್ಷಣದ ಗುಣಮಟ್ಟ ಸುಧಾರಣೆ ಮಾಡಲು ಅನೇಕ ನಿಯಮಗಳನ್ನು ಜಾರಿಗೆ ತಂದರೂ ಅದರಲ್ಲಿ ಅಧ್ಯಾಪಕರಿಗೆ ಪಿ.ಎಚ್.ಡಿ. ಕಡ್ಡಾಯ ಎಂಬ ನಿಯಮ ಜಾರಿಗೆ ತಂದರು ಎಂದರು.

ಪಿಎಚ್.ಡಿ. ಅಧ್ಯಯನಕ್ಕೆ ಕೋರ್ಸ್ ವರ್ಕ್ ಕಡ್ಡಾಯವಾಗಿದೆ. ಹಾಗಾಗಿ ವಿಶ್ವವಿದ್ಯಾಲಯದ ನಿಯಮವನ್ನು ಸಂಶೋಧನಾರ್ಥಿಗಳು ಕಡ್ಡಾಯವಾಗಿ ಪಾಲಿಸಿ ಒಂದು ಒಳ್ಳೆಯ ಸಂಶೋಧನಾ ಪ್ರಬಂಧಗಳನ್ನು ಮಂಡಿಸಬೇಕೆಂದು ಹೇಳಿದರು.

ಹಿರಿಯ ಸಂಶೋಧನಾಧಿಕಾರಿ ಡಾ. ಪ್ರೇಮಕುಮಾರ ಹಾಗೂ ಬೋಧಕ-ಬೋಧಕೇತರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

ಕಲಾ ಅಧ್ಯಾಪಕ ಶರೀಫ ಪ್ರಾರ್ಥಿಸಿದರು. ಪ್ರಾಧ್ಯಾಪಕ ಡಾ. ಚಂದ್ರಪ್ಪ ಸೊಬಟಿ ಸ್ವಾಗತಿಸಿದರು. ಡಾ. ಮಲ್ಲಿಕಾರ್ಜುನ ಮಾನ್ವಡೆ ಕಾರ್ಯಕ್ರಮ ನಿರೂಪಿಸಿದರು. ಡಾ. ಬಸವರಾಜ ಎಸ್.ಜಿ. ವಂದಿಸಿದರು.

ಸಂಯುಕ್ತ ಕರ್ನಾಟಕ Wed, 25 May 2022
epaper.samyukthakarnataka.com/c/68266123

**Source: Samyuktha Karnataka date: 25-05-2022**

# ಸಂಶೋಧನೆ ಸತ್ಯದ ಅನ್ವೇಷಣೆ: ಮಾಧವ

## ಪಿಎಚ್‌.ಡಿ ಪದವಿ ಕೋರ್ಸ್‌ಗಳ ಉದ್ಘಾಟನಾ ಸಮಾರಂಭ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ: ಸಂಶೋಧನಾತ್ಮಕ ಚಿಂತನೆಗಳು ವಿದ್ಯಾರ್ಥಿಗಳಲ್ಲಿ ಬೆಳೆಯಬೇಕು. ಗತಿಸಿದ ಘಟನಾವಳಿಗಳ ಬಗ್ಗೆ ಸತ್ಯ ಸಂಗತಿಗಳು ಜನಮನಕ್ಕೆ ತಲುಪಿಸುವ ಉದ್ದೇಶದಿಂದ ಪಿಎಚ್‌.ಡಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಸಂಶೋದನಾರ್ಥಿಗಳು ಪ್ರಮಾಣ ಪತ್ರ ಪಡೆಯಲು ಮಾತ್ರ ಸಂಶೋಧನೆ ಮಾಡಬಾರದು ಎಂದು ಹಂಪಿ ವಿಶ್ವವಿದ್ಯಾಲಯದ ಡೀನ್ ಡಾ.ಮಾಧವ ಪೆರಾಜೆ ಹೇಳಿದರು.

ತಾಲ್ಲೂಕಿನ ಗೊಟಗೋಡಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಡೆದ ಪಿಎಚ್‌.ಡಿ ಕೋರ್ಸ್‌ಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಸಂಶೋಧನಾ ಜ್ಞಾನದ ಆಯಾಮಗಳು ಭಿನ್ನವಾಗಿವೆ. ಸಂಶೋಧನೆಯು ಒಂದು ವಿಸ್ತಾರ ಅಧ್ಯಯನ ಕ್ಷೇತ್ರವಾಗಿದ್ದು ಉನ್ನತವಾದ ಜ್ಞಾನವನ್ನು ಸಂಪಾದಿಸುವ ಒಂದು ವಿಧಾನ. ಮನುಷ್ಯನ ಹುಟ್ಟಿಗೆ ವೈಜ್ಞಾನಿಕ ಕಾರಣವನ್ನು ಸಂಶೋಧನೆಯ ಮೂಲಕ ಕೊಡಬಹುದೇ ಹೊರತು ಬರಿ ಮಾತಿನಿಂದ ದೃಢೀಕರಿಸಲು ಸಾಧ್ಯವಿಲ್ಲ.

ಸಂಶೋದನೆಯು ಒಂದು ಸಮಸ್ಯೆಯ ಹಿನ್ನೆಲೆಯಿಂದ ಪ್ರಾರಂಭವಾಗಬೇಕು. ಪಿಎಚ್‌.ಡಿ ಎನ್ನುವುದು ಕೇವಲ ಉದ್ಯೋಗಕ್ಕೆ ಪಡೆದುಕೊಳ್ಳುವ ಪದವಿಯಾಗಿರದೆ ಜ್ಞಾನವನ್ನು ಪಡೆದುಕೊಳ್ಳುವ ಶಿಸ್ತಾಗಬೇಕು. ಸೈದ್ಧಾಂತಿಕ ಶಿಸ್ತಾಗಿ ಬಳಕೆಯಾಗಬೇಕು. ಈ ಭೂಮಿಯ ಆಕಾಶಕಾಯಗಳ ಕಾರ್ಯಚಟುವಟಿಗೆ ವೈಜ್ಞಾನಿಕ ಸಂಶೋಧನೆಯ ಹಿನ್ನೆಲೆಯನ್ನೆ ಕೊಡಬಹುದು. ಜ್ಞಾನವನ್ನು ಕೇವಲ ಮೌಖಿಕವಾಗಿ ಬಿತ್ತರಿಸುವುದಲ್ಲ. ಅದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಬೇಕು ವಿಜ್ಞಾನ ಮತ್ತು ಪರಂಪರೆಯನ್ನು ಅನುಸಂಧಾನಗೊಳಿಸಿ ಪಿಎಚ್‌ಡಿ ಅಧ್ಯಯನವನ್ನು ಮುಂದುವರಿಸುವುದು ಸೂಕ್ತ ಎಂದರು.

ಕುಲಪತಿ ಪ್ರೊ. ಸಿ.ಟಿ.ಗುರುಪ್ರಸಾದ್ ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಎನ್ನುವುದು ಒಂದು ಅವಿಭಾಜ್ಯ ಅಂಗವಾಗಿದೆ. ಪಿಎಚ್‌.ಡಿ ಅಧ್ಯಯನವು ಜ್ಞಾನದ ದಿಗಂತವನ್ನು ವಿಸ್ತರಿಸಿಕೊಳ್ಳುವ ಒಂದು ಶೈಕ್ಷಣಿಕ ವಿಧಾನವಾಗಿದೆ. ಹಾಗಾಗಿ ಸಂಶೋಧನಾರ್ಥಿಗಳು ಅಧ್ಯಯನದ ಪೂರ್ವದಲ್ಲಿಯೆ ಸಂಶೋಧನೆಗೆ ಪೂರ್ವದಲ್ಲಿ ಬೇಕಾದ ತಯಾರಿ ಮಾಡಿಕೊಂಡಿರಬೇಕು. ಎಲ್ಲರೂ ತಿಳಿದಿರುವ ಹಾಗೆ ಸಂಶೋಧನೆಯು ಸರಳವಾದ ವಿಷಯವಲ್ಲ. ಇದು ಒಂದು ತಪಸ್ಸು, ಅದರ ಹಿಂದೆ ನಾವು ಯಶಸ್ಸಿನ ದಾರಿಯನ್ನು ಕಂಡುಕೊಳ್ಳಲು ಸಾಧ್ಯ. ಹಾಗಾಗಿ ಜಾನಪದ ವಿಶ್ವವಿದ್ಯಾಲಯ ಒಂದು ಶಿಸ್ತುಬದ್ಧವಾದ ಸಂಶೋಧನೆಗೆ ಪ್ರಾಧ್ಯಾನ್ಯತೆ ನೀಡಲಿದೆ ಎಂದರು.

ಮೌಲ್ಯಮಾಪನ ಕುಲಸಚಿವ ಪ್ರೊ.ಎನ್‌.ಎಮ್‌.ಸಾಲಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ಸಂಶೋಧನಾಧಿಕಾರಿ ಡಾ.ಪ್ರೇಮಕುಮಾರ, ಪ್ರಾಧ್ಯಾಪಕರಾದ ಡಾ.ಚಂದ್ರಪ್ಪ ಸೊಬಟಿ, ಡಾ.ಮಲ್ಲಿಕಾರ್ಜುನ ಮಾನ್ಪಡೆ, ಡಾ.ಬಸವರಾಜ ಎಸ್‌.ಜಿ ಕಲಾ ಅಧ್ಯಾಪಕ ಶರೀಫ ಮಾಕಾಪುರ, ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಇದರು.



ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಡೆದ ಪಿಎಚ್‌.ಡಿ ಪದವಿ ಕೋರ್ಸ್‌ಗಳ ಉದ್ಘಾಟನಾ ಸಮಾರಂಭಕ್ಕೆ ಕುಲಪತಿ ಪ್ರೊ.ಸಿ.ಟಿ. ಗುರುಪ್ರಸಾದ್ ಚಾಲನೆ ನೀಡಿದರು

**ಮುಖ್ಯಾಂಶಗಳು**

- ಸಂಶೋಧನೆ ಸರಳ ವಿಷಯವಲ್ಲ, ತಪಸ್ಸು
- ಸಂಶೋಧನೆಗೂ ಮೊದಲು ಪೂರ್ವತಯಾರಿ ಅಗತ್ಯ
- ಕೇವಲ ಪ್ರಮಾಣಪತ್ರಕ್ಕೆ ಸಂಶೋಧನೆ ಸಲ್ಲದು

**Sourse: Prajavani date: 25-05-2022**


ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ


ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ
ಪಿಎಚ್.ಡಿ. ಕೋರ್ಸ್‌ವರ್ಕ್ ತರಗತಿಗಳ
ಉದ್ಘಾಟನಾ ಸಮಾರಂಭ
REDMI NOTE 5 PRO
MI DUAL CAMERA
2022/5/24 12:48


ಕರ್ನಾಟಕ ಜಾನಪದ
ಪಿಎಚ್.ಡಿ. ಕೋರ್ಸ್‌ವರ್ಕ್
REDMI NOTE 5 PRO
MI DUAL CAMERA
2022/5/24 12:46


ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ
ಪಿಎಚ್.ಡಿ. ಕೋರ್ಸ್‌ವರ್ಕ್ ತರಗತಿಗಳ
ಉದ್ಘಾಟನಾ ಸಮಾರಂಭ
REDMI NOTE 5 PRO
MI DUAL CAMERA
2022/5/24 11:35


ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ
ಪಿಎಚ್.ಡಿ. ಕೋರ್ಸ್‌ವರ್ಕ್ ತರಗತಿಗಳ
ಉದ್ಘಾಟನಾ ಸಮಾರಂಭ
ದಿನಾಂಕ: ೨೪-೦೫-೨೦೨೨
REDMI NOTE 5 PRO
MI DUAL CAMERA
2022/5/24 11:31


REDMI NOTE 5 PRO
MI DUAL CAMERA
2022/5/24 11:47